Fourthly, whether the Government of India demanded power to Bharath Gold Mines of Kolar. ಕೋಲಾರದ ಭಾರತ ಗೋಲ್ಡ್ ಮೈನ್ಸ್‌ಗೆ ಪವರ್ ಸಪ್ಲೈ ಮಾಡುವಂತಾದರೆ ಶಿವನಸಮುದ್ರದ ಪವರ್ ಪ್ಲಾಂಟ್‌ನಿಂದ ಮಾಡುವಂತೆ ಏನಾದರೂ ಮಿನಿಸ್ಟ್ರಿಯವರು ಕೇಳಿದ್ದಾರೆಯೇ?

ಶ್ರೀ ಜೆ. ಹೆಚ್. ಪಟೇಲ್. —ಸ್ಟೀಲ್ ಅಥಾರಟಿ ಆಫ್ ಇಂಡಿಯಾ ಅವರಿಗೆ ಈ ಕಾರ್ಖಾನೆಯನ್ನು ವಹಿಸಿಕೊಡುವ ಬಗ್ಗೆ ಕರ್ನಾಟಕ ಸರ್ಕಾರ ಈಗಾಗಲೇ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಕಳೆದ ಒಂದೂವರೆ ವರ್ಷದಿಂದ ಅವರು ಹೇಳಿದ್ದ ಷರತ್ತುಗಳಿಗೆ ಅಂದರೆ ಬಹುತೇಕ ಷರತ್ತುಗಳಿಗೆ ನಾವು ಒಪ್ಪಿಗೆ ಕೊಟ್ಟಿದ್ದೇವೆ. ಕಳೆದ ಎರಡು ತಿಂಗಳ ಕೆಳಗೆ ಸ್ಟೀಲ್ ಮಿನಿಸ್ಟರ್ ಅವರನ್ನು ಕಂಡು ತಿದಷ್ಟು ಬೇಗ ತೀರ್ಮಾನ ಮಾಡುವಂತೆ ಕೇಳಿದ್ದೇನೆ. ಅವರು ಬಹಳ ಸಿಂಪಥೆಟಿಕ್ ಆಗಿ ಕನ್ಸಿಡರ್ ಮಾಡುತ್ತೇನೆಂದು ಹೇಳಿದ್ದಾರೆ. ವರ್ಕರ್ಸ್ ಬಗ್ಗೆ ಗೋಲ್ಡನ್ ಶೇಕ್ ಪ್ರಾಂಡ್ ಬಗ್ಗೆ, ಒಂದು ಸಲ ''ಸೇಲ್'' ನವರು ವಿ. ಐ. ಎಸ್. ಎಲ್. ನವರು ತೆಗೆದುಕೊಂಡರೆ ಅದನ್ನು ಅವರೇ ಮಾಡುತ್ತಾರೆ. ಇದಕ್ಕಾಗಿ ೮-೯ ಕೋಟಿ ರೂಪಾಯಿಗಳಾದರೆ ರಾಜ್ಯಸರ್ಕಾರದವರು ಅರ್ಧ ಭಾಗ ''ಸೇಲ್''ನವರು ಅರ್ಧಭಾಗ ವಹಿಸಿಕೊಡಲು ಒಪ್ಪಿಕೊಂಡಿದ್ದೇವೆ ಪವರ್ ಬಗ್ಗೆ ಒಪ್ಪಿಕೊಂಡಿದ್ದೇವೆ. ವಿದ್ಯುಚ್ಛಕ್ತಿ ಬಾಕಿಯ ಬಗ್ಗೆ ಕೆಲವು ಕಂಡಿಷನ್‌ಗಳಿಗೆ ನಾವು ಒಪ್ಪಿಕೊಂಡಿದ್ದೇವೆ.

ಶ್ರೀ ಎನ್. ಎಂ. ಅಡ್ಯಂತಾಯ್ಯ. —ಸುಮಾರು ೮ ಸಾವಿರ ಕಾರ್ಮಿಕರು...

ಅಧ್ಯಕ್ಷರು. —ನಾನು ಅವಕಾಶ ಕೊಡುವುದಿಲ್ಲ.

I have not allowed you. Whatever you say will not be recorded.

x x x

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಅಧ್ಯಕ್ಷರ ನೇಮಕ

೪೦೨೮. ಶ್ರೀ ಬಿ. ಎ. ಉಮರಬ್ಬ (ವಿಟ್ಲ) ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಒಬ್ಬ ಹಿರಿಯ ಐ.ಎ.ಎಸ್. ಅಧಿಕಾರಿಯನ್ನು ನೇಮಿಸುವ ವಿಚಾರ ಯಾವ ಹಂತದಲ್ಲಿದೆ ?

ಆ) ಅದು ಯಾವಾಗ ಕಾರ್ಯಗತಗೊಳ್ಳುತ್ತದೆ ?

ಶ್ರೀ ಜೆ. ಹೆಚ್. ಪಟೇಲ್, (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಸಚಿವರು).—

ಅ) ಮತ್ತು ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರ ನೇಮಕಾತಿ ಬಗ್ಗೆ ಇರುವ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಸರ್ಕಾರವು ಇದರ ಬಗ್ಗೆ ಸೂಕ್ತ ಸಮಯದಲ್ಲಿ ತೀರ್ಮಾನ ಕೈಗೊಳ್ಳುವುದು.

೧೨-೫೦ ಪಿ.ಎಂ.

ಅಧ್ಯಕ್ಷರು. —ಕ್ವೆಶ್ಚನ್ ಅವರ್ ಮುಗಿದ ಮೇಲೆ ೧೦ ಪ್ರಶ್ನೆ ಇತ್ತು. ೧೦ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡುವುದು ಬೇಡ ಎಂದು ಒಂದೇ ಒಂದು ಉಪ ಪ್ರಶ್ನೆ ಕೇಳಿ ಎಂದು ಹೇಳಿದ್ದೇನೆ.

ಶ್ರೀ ಎನ್. ಎಂ. ಅಡ್ಯಂತಾಯ. —ಇನ್ನು ಒಂದೇ ಒಂದು ಉಪ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು. —ಅವಕಾಶ ಕೊಡುವುದಿಲ್ಲ, ನಾನು ಯಾರಿಗೂ ಕೊಟ್ಟಿಲ್ಲ. ನಿಮಗೂ ಕೊಡುವುದಿಲ್ಲ.

---

xNot recorded as ordered by the Chair

ಶ್ರೀ ಪಟವಂಕ್ಕಿ ರತ್ನಾಕರ.—ಲ್ಯಾಪ್ಸ್ ಯಾಕೆ ಆಗುತ್ತದೆ. ಅವರ ವಿಚಾರವನ್ನು ಅವರು ಕೇಳುತ್ತಿದ್ದಾರೆ.

ಅಧ್ಯಕ್ಷರು.—ನಾಳೆ ಕೂಡ ಹೀಗೆ ಮಾಡಿದಿರಿ ಅಂದರೆ ಕ್ವೆಶ್ಚನ್ ಅವರ್ ಮುಗಿದ ಕೂಡಲೇ ಎಲ್ಲಾ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡುತ್ತೇನೆ. ನೀವು ಬೇಕಾದರೆ ಅರ್ಧ ಗಂಟೆ ಡಿಸ್ಕಷನ್‌ಗೆ ಬರೆದುಕೊಡಿ ನಾನು ಅವಕಾಶ ಕೊಡುತ್ತೇನೆ.

ಶ್ರೀ ಎನ್. ಎಂ. ಆಡ್ಯಂತಾಯ.—ಇನ್ನು ಮೂರು ದಿವಸ ಇದೆ. ಇದು ಬಹಳ ಮುಖ್ಯವಾದ ವಿಷಯ...

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಉಮರಬ್ಬ ನವರೇ, ನೀವು ಪ್ರಶ್ನೆಯನ್ನು ಕೇಳಿ.

ಶ್ರೀ ಬಿ. ಎ. ಉಮರಬ್ಬ.—ನನಗೆ ಇವೊತ್ತು ಮೂರು ಪ್ರಶ್ನೆಗಳನ್ನು ಕೇಳುವುದಕ್ಕೆ ಒಪ್ಪಿಗೆ ಕೊಡಿ. ಅವುಗಳೆಂದರೆ, ಪ್ರಶ್ನೆ ಸಂಖ್ಯೆ ೪೨೭, ೪೦೯ ಮತ್ತು ೪೦೩.

ಅಧ್ಯಕ್ಷರು.—೪೦೩ನೇ ಪ್ರಶ್ನೆ ಒಂದೇ ಇವೊತ್ತು ಇರುವುದು.

ಶ್ರೀ ಜೆ. ಹೆಚ್. ಪಟೇಲ್.—೪೦೨ನೇ ಪ್ರಶ್ನೆ ಸರ್ಕಾರದ ಗಮನಕ್ಕೆ ಬಂದಿಲ್ಲ.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೧೦೦೯ (೪೦೨ನೇ) ಇವೊತ್ತು ಇರುವುದು. ಮತ್ತು ಇನ್ನು ಉಳಿದ ಪ್ರಶ್ನೆಗಳಿಗೂ ಇವತ್ತೇ ಉತ್ತರಿಸುವುದೆಂದಿದೆ.

ಶ್ರೀ ಜೆ. ಹೆಚ್. ಪಟೇಲ್.—ಉತ್ತರ ತರಿಸಿಕೊಡುತ್ತೇನೆ. ರಾಜ್ಯ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಕಾರ್ಯದಕ್ಷತೆ ಹೆಚ್ಚಿಸಲು ಸರ್ಕಾರದ ವಿಚಾರ ಏನು ಇದೆ ಎಂದು ಇವರಿಗೆ ಹೇಗೆ ಗೊತ್ತಾಯಿತು. ಐ.ಎ.ಎಸ್. ಅಧಿಕಾರಿಗಳನ್ನು ನೇಮಕ ಮಾಡುತ್ತೇವೆ, ಇಂಜಿನಿಯರ್ ಅವರನ್ನು ನೇಮಕ ಮಾಡುತ್ತೇವೆ, ಅಥವಾ ಎಕ್ಸ್‌ಪರ್ಟ್‌ಗಳನ್ನು ಕರೆಯಿಸುತ್ತೇವೆ. ಕೆ.ಇ.ಬಿ. ಛೇರ್ಮನ್‌ರವರು ರಿಟೈರ್ ಆಗುತ್ತಾರೆ. ಕಾರ್ಯದಕ್ಷತೆಯನ್ನು ಹೆಚ್ಚಿಸಲು ಯಾರನ್ನು ಮಾಡಬೇಕು ಎಂಬ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಆಕ್ಟ್‌ನಲ್ಲಿ ಏನು ಪ್ರಾವಿಷನ್ ಇದೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಇಷ್ಟೇ. ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಅಧ್ಯಕ್ಷರನ್ನು ನೇಮಿಸುವ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಹೇಳುತ್ತೇನೆ. ಯಾರನ್ನು ಮಾಡುತ್ತೇವೆಂದು ಹೇಳಿದರೆ ಮಾನ್ಯ ಸದಸ್ಯರು ಯಾವಾಗ ಮಾಡುತ್ತೀರಾ ಎಂದು ಕೇಳುತ್ತಾರೆ. ಯಾವ ಹಂತದಲ್ಲಿದೆ ಎಂಬ ಪ್ರಶ್ನೆಗೆ ಆ ವಿಚಾರ ಇನ್ನೂ ಪರಿಶೀಲನೆಯಲ್ಲಿದೆ ಎಂದು ಹೇಳುತ್ತೇನೆ.

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರ ನೇಮಕಾತಿ ಬಗ್ಗೆ ಇರುವ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಹೇಳಿದಿರಿ, ಸಮಯ ಹೇಳಲಿಲ್ಲ. ನಾನು ಕೇಳಿರುವುದಕ್ಕೆ ಸರಳವಾದ ಕಾರಣ ಇಷ್ಟೇ, ಕೆ.ಇ.ಬಿ. ಯಲ್ಲಿ ಜವಾಬ್ದಾರಿಯನ್ನು ವಹಿಸಿಕೊಂಡಂತಹ ವ್ಯಕ್ತಿಗಳು ಏಷ್ಟೋ ಸಲ ಅಲ್ಲಿಗೆ ಸರಿಹೋಗುವುದಿಲ್ಲ ನನ್ನ ಅಭಿಪ್ರಾಯ ಅಲ್ಲಿ ಬಹಳ ಸಂಪರ್ಕವನ್ನು ಇಟ್ಟುಕೊಂಡಿರುವ ಅಧಿಕಾರಿ ಒಬ್ಬರನ್ನು ನೇಮಿಸಬೇಕು. ಆಲ್ಲಿರುವ ವ್ಯಕ್ತಿ ಇಂಜಿನಿಯರ್ ಆಗಿರಬಹುದು ವಿಜಿಲೆನ್ಸ್ ಆಫೀಸರ್ ಆಗಿರಬಹುದು. ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಸಿ.ಎ. ಪಾಸ್ ಮಾಡಿರುವವರೂ ಅಧಿಕಾರಿಗಳಾಗಿರುತ್ತಾರೆ. ಇಲ್ಲೂ ಸಹ ಒಬ್ಬ ಅಧಿಕಾರಿ ಸಿ ಎ. ಪಾಸ್ ಮಾಡಿಕೊಂಡಿರುವವರು ಇರುತ್ತಾರೆ. ಇಲ್ಲಿ ಇಂಜಿನಿಯರಿಂಗ್‌ನಲ್ಲಿ ಅನುಭವ ಇರುವಂತಹ ವ್ಯಕ್ತಿಯನ್ನು ನೇಮಿಸಬೇಕು. ಇಂತಹ ಹುದ್ದೆಗಳಲ್ಲಿ ಇಂಜಿನಿಯರ್ ಆಗಿರುವವರು ಇದ್ದರೆ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಸರಿ ಹೋಗುತ್ತದೆ. ಎಂದು ನನ್ನ ಸಲಹೆ ಕಾಸ್ಟ್ ಆಕೌಂಟ್ಸ್ ಪಾಸ್ ಮಾಡಿದ ಆಕೌಂಟೆಂಟ್ ಜಾಗದಲ್ಲಿ ಇಂಜಿನಿಯರ್ ಇರುವುದು ಸರಿಯಲ್ಲ. ಆದುದರಿಂದ ಅನುಭವ ಇರುವಂತಹ, ನುರಿತಂತಹ ಇಂಜಿನಿಯರ್ ಅವರನ್ನು ಇಲ್ಲಿ ನೇಮಿಸಬೇಕೆಂದು ನನ್ನ ಸಲಹೆ.

ಶ್ರೀ ಜೆ. ಹೆಚ್. ಪಟೇಲ್.—ಯಾವುದೇ ಒಂದು ಸಂಸ್ಥೆಯ ದಕ್ಷತೆಯನ್ನು ಹೆಚ್ಚಿಸುವ ಬಗ್ಗೆ ಎಲ್ಲ ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತದೆ. ಆದರೆ ಮಾನ್ಯ ಸದಸ್ಯರಿಗೆ ಇಷ್ಟೇ ಹೇಳುತ್ತೇನೆ. ಈಗ ವಿದ್ಯುಚ್ಛಕ್ತಿ ಮಂಡಳಿಯ ಕೆಲವು ಕೆಲಸಗಳಲ್ಲಿ ದೋಷ ಇರಬಹುದು. ಇಲ್ಲವೆಂದು ನಾನು ಹೇಳುವುದಿಲ್ಲ. ಅಲ್ಲಿ ಎಲ್ಲ ಸರಿಯಾಗಿದೆ ಎಂದು ನಾನು ಹೇಳುವುದಿಲ್ಲ. ಆದರೆ ಅವರು ಮಾಡಿರುವಂತಹ ಕೆಲಸದ ಬಗ್ಗೆ ನೋಡಿದರೆ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಇನ್ನೂ ಹೆಚ್ಚು ಕೆಲಸ ಮಾಡಬೇಕಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಕೌಂಟೆಂಟ್ ಇರಂಥ ಕಡೆ ಇಂಜಿನಿಯರ್ ಇದ್ದರೆ, ಇಂಜಿನಿಯರ್ ಅವರು ಇರುವ ಕಡೆ ಅಕೌಂಟೆಂಟ್ ಇದ್ದರೆ ಅದನ್ನು ಸರಿಪಡಿಸುವುದು ಸೂಕ್ತವಾಗಿದೆ. ಇದನ್ನೆಲ್ಲಾ ಸರಿಪಡಿಸಲು ಅಲ್ಲಿಗೆ ನಾವು ಹೊಸ ಅಧ್ಯಕ್ಷರನ್ನು ನೇಮಕ ಮಾಡುತ್ತೇವೆ. ಆದರೆ ಯಾರೂ ಎಂದು ಈಗ ಹೆಸರು ಹೇಳುವುದು ಸರಿಯಲ್ಲ.

ಶಿಕಾರಿಪುರ ತಾಲ್ಲೂಕ್ ಗಾಂಧಿನಗರದ ವಿದ್ಯುದ್ದೀಕರಣದ ಬಗ್ಗೆ

೩೦೬೮. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕಾರಿಪುರ ತಾಲ್ಲೂಕು ಗಾಂಧಿನಗರಕ್ಕೆ ವಿದ್ಯುದ್ದೀಕರಣ ಮಾಡಲಾಗಿದೆಯೇ

ಆ) ಹಾಗಿಲ್ಲದಿದ್ದರೆ ಅದಕ್ಕೆ ಕಾರಣವೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಗಾಂಧಿನಗರದ ವಿದ್ಯುದ್ದೀಕರಣ ಕಾರ್ಯ ಮುಗಿದಿದೆ. ವಿದ್ಯುತ್ ಪರಿವೀಕ್ಷಕರಿಂದ ಪರೀಕ್ಷಿಸಬೇಕಾಗಿದೆ. ಅವರಿಗೆ ಪತ್ರ ಬರೆಯಲಾಗಿದೆ. ಅವರ ಅನುಮತಿ ಪಡೆದ ಕೂಡಲೇ ಗಾಂಧಿನಗರಕ್ಕೆ ವಿದ್ಯುತ್ ಸರಬರಾಜು ಮಾಡಲಾಗುವುದು.

ಆ) 'ಅ' ಉತ್ತರದಿಂದ ಉದ್ಭವಿಸುವುದಿಲ್ಲ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಶಿಷ್ಟನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುವುದು.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಶಿಷ್ಟನೇ ಪಟ್ಟಿಯ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಮಂಗಳೂರು ಅನಿಲ ಟರ್ಬೈನ್ ವಿದ್ಯುತ್ ಘಟಕ

೪೦೭೯. ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದ ಮುಂದೆ ಒಟ್ಟು ಎಷ್ಟು ವಿದ್ಯುತ್ ಯೋಜನೆಗಳಿವೆ? ಅವು ಯಾವುವು ಹಾಗೂ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು, ಅವುಗಳ ಯೋಜನಾ ವಿವರ ಹಾಗೂ ಅಂದಾಜಿಸಲಾದ ವೆಚ್ಚವೆಷ್ಟು?

ಆ) ಅವುಗಳನ್ನು ಯಾವಾಗ ಪ್ರಾರಂಭಿಸಲಾಗುತ್ತದೆ?